ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು

ದಿಃ19-10-2024

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ ಪಿ ಎಸ್ ವಕೀಲರಿಂದ**

1ನೇ ಪ್ರತಿವಾದಿ ನನ್ನ ಸಹೋದರ ಇರುತ್ತಾರೆ. ನನ್ನ ಮತ್ತು ಅವರ ಒಡನಾಟ ಚೆನ್ನಾಗಿ ಇರುತ್ತದೆ. ನಾನು 30 ವರ್ಷಗಳಿಂದ ಸಕಲೇಶಪುರದ ಬಾಡಿಗೆ ಮನೆಯಲ್ಲಿ ವಾಸ ಇರುತ್ತೇನೆ. 1ನೇ ಪ್ರತಿವಾದಿ ನಮ್ಮ ತಾಯಿಯ ಮನೆಯಲ್ಲಿ ವಾಸ ಇರುತ್ತಾರೆ. ನನ್ನ ತಾಯಿ ಮರಣ ಹೊಂದಿ ಸುಮಾರು 35 ವರ್ಷ ಆಗಿರುತ್ತದೆ. ದಾವಾ ಆಸ್ತಿಯನ್ನು ಹೊರತುಪಡಿಸಿ ನಮಗೆ ಬೇರೆ ಯಾವುದೇ ಪಿತ್ರಾರ್ಜಿತ ಆಸ್ತಿ ಇರುವುದಿಲ್ಲ. ದಾವಾ ಅಸ್ತಿ ನಮ್ಮ ತಾಯಿಗೆ ಸುಮಾರು 70-80 ವರ್ಷಗಳ ಹಿಂದೆ ಸರ್ಕಾರದಿಂದ ಮಂಜೂರಾಗಿರುತ್ತದೆ. ದಾವಾ ಆಸ್ತಿ ಮಂಜೂರಾದಾಗ ನಾನು ಚಿಕ್ಕ ವಯಸ್ಸಿನವಳಿದ್ದೆ. ನನಗೆ ಈಗ 65 ವರ್ಷ ವಯಸ್ಸಾಗಿದೆ. ದಾವಾ ಆಸ್ತಿ ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ.

ದಾವಾ ಅಸ್ತಿಯ ಸಲುವಾಗಿ ನನ್ನ ತಾಯಿ 1ನೇ ಪ್ರತಿವಾದಿಗೆ ವಿಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಯಾವ ವರ್ಷದಲ್ಲಿ ಮರಣ ಹೊಂದಿರುತ್ತಾರೆ ಎಂದು ನೆನಪಿಲ್ಲ. ನನ್ನ ತಾಯಿಯ ಜೀವಿತ ಕಾಲದಲ್ಲಿ ಅವರು 1ನೇ ಪ್ರತಿವಾದಿ ಜೊತೆ ವಾಸ ಇದ್ದರು ಎಂದರೆ ಸರಿ. ನನ್ನ ತಾಯಿಯ ಸಂಪೂರ್ಣ ಜವಾಬ್ದಾರಿಯನ್ನು 1ನೇ ಪ್ರತಿವಾದಿ ನಿರ್ವಹಿಸುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ನೋಡಿಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯೇ ನನ್ನ ತಾಯಿಯನ್ನು ನೋಡಿಕೊಳ್ಳುತ್ತಿದ್ದುದರಿಂದ, ದಿಃ 20-03-1990 ರಂದು ನನ್ನ ತಾಯಿ ಅವರ ಹೆಸರಿಗೆ ವಿಲ್ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ವಿಲ್ ಪತ್ರವನ್ನು ನೋಡಿರುವುದಿಲ್ಲ.

1ನೇ ಪ್ರತಿವಾದಿ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಖಾತೆಯನ್ನು ವಿಲ್ ಮೂಲಕ ಬದಲಾವಣೆ ಮಾಡಿಕೊಂಡಿರುತ್ತಾರೆ, ಆದರೆ ನಮ್ಮ ತಾಯಿ ಯಾವುದೇ ವಿಲ್ ಮಾಡಿಕೊಟ್ಟಿರುವುದಿಲ್ಲ. ವಿಲ್ ವಿಚಾರ ಗೊತ್ತಾದ ನಂತರ ಅದನ್ನು ಪ್ರಶ್ನಿಸಿ ನಾನು ಸಂಬಂಧಪಟ್ಟ ಕಛೇರಿಗೆ ಅರ್ಜಿ ಸಲ್ಲಿಸಿರುವುದಿಲ್ಲ. ವಿಲ್ ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು 20 ವರ್ಷದಿಂದ ತಕರಾರು ಸಲ್ಲಿಸಲು ನನಗೆ ತೊಂದರೆ ಇರಲಿಲ್ಲ. ದಾವಾ ಆಸ್ತಿ ದಾಖಲಾತಿಗಳು ಈಗ 1ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತವೆ. ಈಗ 2ನೇ ಪ್ರತಿವಾದಿ ಹೆಸರಿಗೆ ದಾಖಲಾತಿ ಮಾಡಿರುತ್ತಾರೆ. ಸುಮಾರು 7-8 ವರ್ಷಗಳ ಹಿಂದೆ 2ನೇ ಪ್ರತಿವಾದಿಗೆ ದಾಖಲಾತಿ ವರ್ಗಾವಣೆ ಮಾಡಿರುತ್ತಾರೆ. ದಾನಪತ್ರದ ಮೂಲಕ ಆಸ್ತಿ ವರ್ಗಾವಣೆ ಮಾಡಿರುತ್ತಾರೆ. ಈಗ 2ನೇ ಪ್ರತಿವಾದಿ ಹೆಸರಿನಲ್ಲಿ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ದಿಃ 09-01-2014 ರಂದು 1ನೇ ಪ್ರತಿವಾದಿ 2ನೇ ಪ್ರತಿವಾದಿಗೆ ದಾನಪತ್ರ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿರವರೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ದಾನಪತ್ರ ಮಾಡಿರುವ ವಿಚಾರ ನನಗೆ ದಾನಪತ್ರ ಆದ ಐದು ವರ್ಷಗಳ ನಂತರ ತಿಳಿದಿರುತ್ತದೆ. ದಾವಾ ಆಸ್ತಿಯಲ್ಲಿ 2ನೇ ಪ್ರತಿವಾದಿಗೆ ಮಾತ್ರ ಸಂಪೂರ್ಣ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಭಾಗ ಇರುವುದಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ